ರವರು ಪರಿಶೀಲಿಸಿ ನೀಡಿರುವ ವರದಿಯಂತೆ ನಿವಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಶ್ವಬ್ಯಾಂಕ್ ಯೋಜನೆಯಡಿ ರಸ್ತೆ ಸುರಕ್ಷತಾ ಕ್ರಮಗಳನ್ನು ರೂಪಿಸಿ, ಕಾರ್ಯಗತಗೊಳಿಸಲು ಸಾರಿಗೆ, ಆರೋಗ್ಯ, ಶಿಕ್ಷಣ, ಪೊಲೀಸ್ ಹಾಗೂ ಲೋಕೋಪಯೋಗಿ ಇಲಾಖೆಯ ಪಾಲುದಾರಿಕೆಯಲ್ಲಿ ಸಂಚಾರ ಮತ್ತು ರಸ್ತೆ ಸುರಕ್ಷತಾ ಕೋಶ (Traffic & Road Safety Cell) ವನ್ನು ಸ್ಥಾಪಿಸಲಾಗಿದೆ.

ಅನ್ನಭಾಗ್ಯ ಯೋಜನೆ ಫಲಾನುಭವಿಗಳು

205(146); ಶ್ರೀ ಮೋಹಿಯುದ್ದಿನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ)

ಅ) ಹಸಿವು ಮುಕ್ತ ರಾಜ್ಯ ನಿರ್ಮಾಣದ "ಅನ್ನಭಾಗ್ಯ ಯೋಜನೆಯ"ಯ ಮೂಲಕ ಪ್ರಯೋಜನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಆ) ಕಾಳಸಂತೆಯಲ್ಲಿ ಪಡಿತರ ಮಾರಾಟ, ನಕಲಿ ಕಾರ್ಡ್‌ಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

ಅ) ಹಸಿವು ಮುಕ್ತ ರಾಜ್ಯ ನಿರ್ಮಾಣದ "ಅನ್ನಭಾಗ್ಯ ಯೋಜನೆಯ"ಯ ಮೂಲಕ ಪ್ರಯೋಜನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ: 1,03,40,282 ಆಗಿರುತ್ತದೆ. (ವಿವರ ಲಗತ್ತಿಸಿದೆ)

ಆ) ಕಾಳಸಂತೆಯಲ್ಲಿ ಪಡಿತರ ಮಾರಾಟ, ನಕಲಿ ಕಾರ್ಡ್‌ಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:–

1) ತಾಲ್ಲೂಕು ಸಗಟು ಮಳಿಗೆಗಳನ್ನು ಪರಿಶೀಲನೆ ಮಾಡಲು ಆಹಾರ ಮತ್ತು ಕಂದಾಯ ಸಿಬ್ಬಂದಿಗಳ ತಂಡ ರಚಿಸಿ ಗೋದಾಮಿನ ದಾಸ್ತಾನನ್ನು ಪರಿಶೀಲಿಸಿದ ನಂತರವೇ ನ್ಯಾಯಬೆಲೆ ಅಂಗಡಿ ವಿತರಣೆಗೆ ಅನುಮತಿ ನೀಡಲು ಸೂಚಿಸಲಾಗಿದೆ.

2) ಸಂಬಂಧಿಸಿದ ಅಧಿಕಾರಿಗಳಿಗೆ ಅಗತ್ಯ ವಸ್ತುಗಳ ಕಾಯ್ದೆ 1955ರಡಿ ಹಾಗೂ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 1992ರಡಿ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಸೂಚನೆ ನೀಡಿರುತ್ತದೆ.

3) ವಿಭಾಗ ಮಟ್ಟದಲ್ಲಿ ಗೋದಾಮುಗಳು ಮತ್ತು ನ್ಯಾಯಬೆಲೆ ಅಂಗಡಿಗಳನ್ನು ತಪಾಸಣೆ ಮಾಡುವ ಸಲುವಾಗಿಯೇ ಕಾರ್ಯಪಡೆ (Task force) ರಚಿಸಲು ತಿಳಿಸಿ ಪ್ರಾದೇಶಿಕ ಆಯುಕ್ತರುಗಳಿಗೆ ನಿರ್ದೇಶನ ನೀಡಲಾಗಿದೆ.

4) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತನಿಖಾ ತಂಡವನ್ನು ರಚಿಸಿ ಗೋದಾಮುಗಳ ತನಿಖೆ ನಡೆಸುವಂತೆ ಸೂಚನೆ ನೀಡಲಾಗಿದೆ.

5) ತನಿಖೆ ನಡೆಸಿದ ಬಗ್ಗೆ ಮೇಲ್ವಿಚಾರಣೆ ನಡೆಸಲು ಆಯಾ ಜಿಲ್ಲೆಗಳ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಲಾಗಿದೆ.

6) ವಿವಿಧ ಹಂತದಲ್ಲಿ ಜಾಗೃತಿ ಸಮಿತಿಗಳನ್ನು ರಚಿಸಲು ನಿರ್ದೇಶನ ನೀಡಲಾಗಿದೆ.

7) ಕಂದಾಯ/ ಆರ್‌ಡಿಪಿಆರ್/ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳನ್ನೊಳಗೊಂಡಂತೆ ನ್ಯಾಯಬೆಲೆ ಅಂಗಡಿ ಹಂತದ ಅಧಿಕಾರಿಗಳನ್ನು ನೇಮಿಸಲಾಗಿದ್ದು (ಎಫ್.ಎಲ್.ಓ) ಈ ಅಧಿಕಾರಿಗಳಿಂದಲೇ ಹೊಸ ಅರ್ಜಿ ಹಾಗೂ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ನೈಜತೆ ಪರಿಶೀಲಿಸಲಾಗುತ್ತಿದೆ.

8) ಇದರ ಜೊತೆಗೆ ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿರುವ ಸಂಪೂರ್ಣ ಪಡಿತರ ಚೀಟಿಗಳ ಸಮಗ್ರ ತನಿಖೆ ನಡೆಸಿ ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗುತ್ತಿದೆ. ಈ ಬಗ್ಗೆ ಆಹಾರ ನಿರೀಕ್ಷಕರಿಗೆ ಪ್ರತಿ ಮಾಹೆ ಗುರಿ ನಿಗದಿಪಡಿಸಲಾಗಿದೆ.

9) ಪಡಿತರ ಚೀಟಿದಾರರಿಗೆ ಆಹಾರಧಾನ್ಯಗಳ ವಿತರಣೆ ಮಾಡಿದ ನಂತರ ಪಡಿತರ ವಸ್ತುಗಳ ಮಾರ್ಗಾಂತರ ಮತ್ತು ಸೋರುವಿಕೆಯನ್ನು ತಡೆಯಲು 3 ಹಂತಗಳ ತನಿಖೆಯನ್ನು ಮಾಡಲು ನಿರ್ದೇಶನ ನೀಡಲಾಗಿದೆ. ವಿವರ ಕೆಳಕಂಡಂತ್ತಿದೆ.

ಎ) ಸಗಟು ಮಾರಾಟ ಮಳಿಗೆಯವರು ನ್ಯಾಯಬೆಲೆ ಅಂಗಡಿಗಳಿಗೆ ವಿತರಿಸಲು ಪ್ರತಿ ತಿಂಗಳ 20ನೇ ತಾರೀಖಿನೊಳಗೆ ಎತ್ತುವಳಿ ಮಾಡಿದ ಪಡಿತರ ದಾಸ್ತಾನು ಹಂಚಿಕೆ ಆದೇಶದಲ್ಲಿ ನಮೂದಿಸಿರುವ ಪ್ರಮಾಣ ಮತ್ತು ಉತ್ತಮ ಗುಣಮಟ್ಟದಲ್ಲಿರುವುದೇ ಎಂದು ಜಿಲ್ಲಾಧಿಕಾರಿಗಳು ರಚಿಸಿದ ತನಿಖಾ ತಂಡದಿಂದ ಪರಿಶೀಲಿಸಿ ದೃಢೀಕರಿಸುವುದು.

ಎಲ್ಲಾ ನ್ಯಾಯಬೆಲೆ ಅಂಗಡಿ ವರ್ತಕರು ಪ್ರತಿ ತಿಂಗಳು 1ನೇ ತಾರೀಖಿನಿಂದ ಪಡಿತರ ಚೀಟಿದಾರರಿಗೆ ವಿತರಣೆ ಮಾಡಲು ಎತ್ತುವಳಿ ಮಾಡಿರುವ ಆಹಾರಧಾನ್ಯವು ಹಂಚಿಕೆ ಆದೇಶದ ಪ್ರಮಾಣದಲ್ಲಿ ಹಾಗೂ ಉತ್ತಮ ಗುಣಮಟ್ಟದಲ್ಲಿರುವುದೇ ಎಂದು ಪರಿಶೀಲಿಸಿ ಆಹಾರ ನಿರೀಕ್ಷಕರು ದೃಢೀಕರಿಸಬೇಕು. ಇದೇ ರೀತಿ ನ್ಯಾಯಬೆಲೆ ಅಂಗಡಿ/ಚಿಲ್ಲರೆ ಸೀಮೆಎಣ್ಣೆ ವರ್ತಕರಲ್ಲಿರುವ ದಾಸ್ತಾನು ಮತ್ತು ಗುಣಮಟ್ಟವನ್ನು ಪರಿಶೀಲಿಸಿ ಆಹಾರ ನಿರೀಕ್ಷಕರು ದೃಢೀಕರಿಸಬೇಕು.

ಬಿ) ಸಗಟು ಮಳಿಗೆ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರಧಾನ್ಯಗಳನ್ನು ವಿತರಿಸುವಾಗ ಪರಿಶೀಲಿಸಿ ದೃಢೀಕರಿಸುವುದು.

ಸಿ) ಪ್ರತಿ ಸಗಟು ಮಾರಾಟ ಮಳಿಗೆ ವರ್ತಕರು ತಿಂಗಳ ಅಂತ್ಯದಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರಧಾನ್ಯಗಳ ವಿರಣೆಯನ್ನು ಪೂರ್ಣಗೊಳಿಸಲಿರುವುದರಿಂದ ಮುಂದಿನ ಮಾಹೆಯ 1ನೇ ತಾರೀಖಿನಂದೇ ಸಗಟು ಮಾರಾಟ ಮಳಿಗೆಯ ಅಂತಿಮ ದಾಸ್ತಾನನ್ನು ಪರಿಶೀಲಿಸಿ ದೃಢೀಕರಿಸುವುದು.

ಎಲ್ಲಾ ನ್ಯಾಯಬೆಲೆ ಅಂಗಡಿ ವರ್ತಕರು ಪಡಿತರ ಚೀಟಿದಾರರಿಗೆ ಪ್ರತಿ ತಿಂಗಳ ಪಡಿತರಧಾನ್ಯಗಳು ವಿತರಣೆಯ ನಂತರ ನ್ಯಾಯಬೆಲೆ ಅಂಗಡಿಗಳ ಅಂತಿಮ ದಾಸ್ತಾನಿನ ವಿವರಗಳನ್ನು ಪರಿಶೀಲಿಸಬೇಕು. ಇದಕ್ಕಾಗಿ ಪ್ರತೀ ಕಾರ್ಡುದಾರರಿಗೆ ವಿತರಿಸಲಾದ ಪಡಿತರ ವಿವರಗಳ ತಃಖ್ತೆಯನ್ನು ದಾಸ್ತಾನುವಹಿ ಹಾಗೂ ಬಿಲ್ ಪುಸ್ತಕಗಳನ್ನು ಪರಿಶೀಲಿಸಿ ದೃಢೀಕರಿಸಬೇಕು. ಇದೇ ರೀತಿ ಸೀಮೆಎಣ್ಣೆಯ ಅಂತಿಮ ದಾಸ್ತಾನಿನ ವಿವರವನ್ನು ಸಹ ಪರಿಶೀಲಿಸುವುದು.

10) 2010ರ ಹಿಂದೆ ವಿತರಿಸಲಾದ ಪಡಿತರ ಚೀಟಿಗಳಲ್ಲಿ ಭಾವಚಿತ್ರ ಹಾಗೂ ಬಯೋಮೆಟ್ರಿಕ್ ಸಂಗ್ರಹಿಸುವ ಮೂಲಕ ಅನರ್ಹ ಪಡಿತರ ಚೀಟಿಗಳಿಗೆ ಕಡಿವಾಣ ಹಾಕುವ ವ್ಯವಸ್ಥೆ ಮಾಡಲಾಗಿದೆ.

11) ಇಲಾಖೆಯ ವೆಬ್‌ಸೈಟ್‌ನಲ್ಲಿ ಎಲ್ಲ ಪಡಿತರ ಚೀಟಿಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಗಿದೆ. ಈ ಮಾಹಿತಿಯನ್ನು ಆಧರಿಸಿ ಸಾರ್ವಜನಿಕರು ಯಾವುದೇ ಪಡಿತರ ಚೀಟಿ ಬಗ್ಗೆ ತಮ್ಮ ಅಭಿಪ್ರಾಯವನ್ನು ದಾಖಲಿಸಬಹುದು. ಇದರ

ಆಧಾರದ ಮೇರೆಗೆ ಅನರ್ಹ ಪಡಿತರ ಚೀಟಿ ಹೊಂದಿರುವ ಮಾಹಿತಿ ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುವುದು.

12) "ಅನ್ನಭಾಗ್ಯ" ಯೋಜನೆಯ ಲೋಪದೋಷಗಳ ಬಗ್ಗೆ ಸಾರ್ವಜನಿಕರಿಂದ ಬರುವ ದೂರುಗಳನ್ನು ಸಕಾಲದಲ್ಲಿ ಇತ್ಯರ್ಥಪಡಿಸುವ ಸಲುವಾಗಿ ಗ್ರಾಹಕರ ಸಹಾಯವಾಣಿ (1967 ಉಚಿತ ಕರೆ ಕೇಂದ್ರ) ಸ್ಥಾಪಿಸಲಾಗಿದೆ. ಆನ್‌ಲೈನ್ ಮೂಲಕವು ಸಹ ದೂರು ಸಲ್ಲಿಸಬಹುದು.

13) ಪಡಿತರ ಖಾತರಿ ಯೋಜನೆಯು ಫೆಬ್ರವರಿ 2014 ರಿಂದ ಜಾರಿಗೆ ಬಂದಿದ್ದು, ಪ್ರತಿ ಮಾಹೆ 1ನೇ ತಾರೀಖಿನಿಂದಲೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿದಾರರ ಹಕ್ಕಿನ ಅಕ್ಕಿ, ಗೋದಿ, ಸಕ್ಕರೆ ಗ್ಯಾರಂಟಿಯಾಗಿ ದೊರೆಯುವಂತೆ ಕ್ರಮ ಕೈಗೊಳ್ಳಲಾಗಿದೆ.

14) ವಿವಿಧ ಹಂತಗಳಲ್ಲಿ ಪ್ರತೀ ಮಾಹೆ 7ನೇ ತಾರೀಖಿನಂದು ಆಹಾರ ಅದಾಲತ್‌ಗಳನ್ನು ನಡೆಸುವ ಬಗ್ಗೆ ದಿನಾಂಕ: 20–01–2014 ರಂದು ಆಯುಕ್ತಾಲಯದಿಂದ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಎ) ಪ್ರತಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯ್ತಿ ಮಟ್ಟದ ನೋಡಲ್ ಅಧಿಕಾರಿಯು ತಿಂಗಳಿಗೊಮ್ಮೆ ಆ ವ್ಯಾಪ್ತಿಯ ಕನಿಷ್ಠ 1 ನ್ಯಾಯಬೆಲೆ ಅಂಗಡಿಯನ್ನು ರ್‍ಯಾಂಡಮ್ ಆಗಿ ಪರಿಶೀಲಿಸಲು ನಿರ್ದೇಶಿಸಲಾಗಿದೆ.

ಬಿ) ನಗರ/ಪಟ್ಟಣ/ಪುರಸಭೆಗಳ ಸ್ಥಳೀಯ ಪ್ರಾಧಿಕಾರ ಅಧಿಕಾರಿಗಳು ತಿಂಗಳಿಗೊಮ್ಮೆ ತಮ್ಮ ವ್ಯಾಪ್ತಿಯಲ್ಲಿ ಕನಿಷ್ಠ 1 ನ್ಯಾಯಬೆಲೆ ಅಂಗಡಿಯನ್ನು ರ್‍ಯಾಂಡಮ್ ಆಗಿ ಪರಿಶೀಲಿಸಲು ನಿರ್ದೇಶಿಸಲಾಗಿದೆ.

15) ಪಡಿತರ ಚೀಟಿದಾರರು ತಮ್ಮ ಹಕ್ಕಿನ ಆಹಾರಧಾನ್ಯ ಹಂಚಿಕೆ ತಿಳಿಯಲು ಎಸ್.ಎಂ.ಎಸ್. ವ್ಯವಸ್ಥೆ ಜಾರಿಗೊಳಿಸಲಾಗಿದೆ. ಎಸ್.ಎಂ.ಎಸ್. ಮೂಲಕ ಅವರ ಹಕ್ಕಿನ ಆಹಾರಧಾನ್ಯ ಮಾಹಿತಿ ಪಡೆಯಬಹುದು.

District Wise Ration Card Statement for the month of June 2014

Sl.No.	Name of the District	AAY Cards	BPL Cards	Total
1	2	3	4	5
1	BAGALKOTE	46947	297486	344433
2	BELGAUM	82330	710492	792822
3	BELLARY	61849	295055	356904
4	BIDAR	39940	244037	283977
5	BIJAPUR	43436	311309	354745
6	DHARWAR	29965	282748	312713
7	GADAG	29099	176152	205251
8	GULBARGA	64316	398884	463200
9	HAVERI	47252	279585	326837
10	KOPPAL	37638	219003	256641
11	RAICHUR	53681	265600	319281
12	UTTAR KANNADA	16138	238315	254453
13	YADGIR	29449	165481	194930
14	BANGALORE URBAN	12033	431571	443604
15	BANGALORE RURAL	14420	180594	195014
16	CHAMARAJA NAGARA	35799	206989	242788
17	CHIKMAGALUR	22664	209243	231907
18	CHITRADURGA	42716	313745	356461
19	DAKSHINA KANNADA	21432	183445	204877
20	DAVANAGERE	50250	347985	398235

21	HASSAN	23225	391926	415151
22	KODAGU	10177	90915	101092
23	KOLAR	29932	285917	315849
24	MANDYA	34633	412867	447500
25	MYSORE	50501	550369	600870
26	SHIMOGA	38146	287949	326095
27	TUMKUR	49441	523722	573163
28	UDUPI	18751	131689	150440
29	CHIKKABALLAPURA	28649	252896	281545
30	RAMANAGARA	18826	266395	285221
31	BANGALORE IRA	14890	289393	304283
	TOTAL	**1098525**	**9241757**	**10340282**

ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಆಧಾರದ ನೌಕರರು

206(316); ಶ್ರೀ ಮುನಿರಾಜು ಎಸ್. (ದಾಸರಹಳ್ಳಿ)

ಅ) ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು?

ಆ) ಹಾಗಾದರೆ, ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪ್ರತಿಯೊಂದು ನೌಕರರಿಗೆ ಪ್ರತಿ ತಿಂಗಳಿಗೆ ಎಷ್ಟು ವೇತನವನ್ನು ನೀಡಲಾಗುತ್ತಿದೆ;

ಇ) ಸದರಿ ನೌಕರರಿಗೆ ಪ್ರತಿ ತಿಂಗಳ ವೇತನ ಪಾವತಿಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಗುತ್ತಿಗೆ ಆಧಾರದ ನೌಕರರಿಗೆ ಪ್ರತಿ ತಿಂಗಳು ಸಕಾಲದಲ್ಲಿ ವೇತನ ದೊರೆಯುವಂತಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)